ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

21

ಇಲಾಖೆ / ವಿಷಯ : DEPARTMENT / SUBJECT: ______

ಪತ್ರಿಕೆಯ ಹೆಸರು : NAME OF THE NEWS PAPER: ______ ದಿನಾಂಕ : DATE: 28/9/20

# ಕೇಂದ್ರದ ಮಾಜಿ ಸಚಿವ ಜಸ್ವಂತ್ ಸಿಂಗ್ ನಿಧನ

**ದೆಹಲಿ:** ಕೇಂದ್ರದ ಮಾಜಿ ಸಚಿವ ಜಸ್ವಂತ್ ಸಿಂಗ್ ಅವರು ದೀರ್ಘಕಾಲದ ಅಸ್ವಾಸ್ಥ್ಯದ ಬಳಿಕ ಇಲ್ಲಿನ ಸೇನಾ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.



82 ವರ್ಷದ ಈ ಹಿರಿಯ ನಾಯಕ ಬಿಜೆಪಿಯ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದು ಮಾಜಿ ಪ್ರಧಾನಿ ದಿ. ವಾಜಪೇಯಿ ಅವರ ನಿಕಟವರ್ತಿಯಾಗಿದ್ದರು. ಅವರು ಸೇನಾಪಡೆಯ ನಿವೃತ್ತ ಅಧಿಕಾರಿಯೂ ಆಗಿದ್ದರು.

ಅವರ ಪಾರ್ಥಿವ ಶರೀರವನ್ನು ದೆಹಲಿಯಿಂದ ರಾಜಸ್ಥಾನದ ಜೋಧ್‌ಪುರಕ್ಕೆ ಕರೆತರಲಾಯಿತು. ಅವರ ಫಾರ್ಮ್ ಹೌಸ್‌ನಲ್ಲಿ ಭಾನುವಾರ ಅಂತ್ಯಕ್ರಿಯೆ ನಡೆಸಲಾಯಿತು.

ವಾಜಪೇಯಿ ಸಚಿವ ಸಂಪುಟದಲ್ಲಿ ಅವರು ಹಣಕಾಸು, ವಿದೇಶಾಂಗ ಮತ್ತು ರಕ್ಷಣೆಯಂಥ ಮಹತ್ವದ ಖಾತೆಗಳನ್ನು ನಿರ್ವಹಿಸಿದ್ದರು.

ಜಸ್ವಂತ್ ಸಿಂಗ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ವಿವರಪುಟ → 8

# ಜಸ್ವಂತ್ ಸಿಂಗ್: ಮೆದು ಮಾತಿನ ಗಡಸು ವ್ಯಕ್ತಿತ್ವ

**ದೆಹಲಿ:** ಮೆದು ಮಾತಿನ, ಮಾಜಿ ನಾಯಕ ಜಸ್ವಂತ್ ಸಿಂಗ್ ಭಾರತೀಯ ಜನತಾಪಕ್ಷದ ದಾರಿ ದೀಪವಾಗಿದ್ದು, ಅಟಲ್ ಬಿಹಾರಿ ವಾಜಪೇಯಿ ಮತ್ತು ಲಾಲ್ ಕೃಷ್ಣ ಅಡ್ವಾಣಿಯವರ ಕಾಲದ ನೆಚ್ಚಿನ ನಾಯಕರಾಗಿದ್ದರು. ಅವರ ನಿಧನದಿಂದ ನಂತರ ಆ ಹೆಗ್ಗುರುತು ಅಳಿಸಿಹೋದಂತಾಗಿದೆ.

ಭಾರತೀಯ ಸೇನೆಯಲ್ಲಿ ಮೇಜರ್ ರ‍್ಯಾಂಕ್‌ನ ಅಧಿಕಾರಿಯಾಗಿದ್ದ ಸಿಂಗ್, ಬೇರೆಯವರೊಂದಿಗೆ ಮೀಟಿಂಗ್‌ಗಳಿಗೆ ಕರಾರುವಾಕ್ಕಾದ ಸಮಯಕ್ಕೆ ಹಾಜರಿರುತ್ತಿದ್ದರು. ಇವರು ತಮ್ಮ 82ನೇ ವಯಸ್ಸಿನಲ್ಲಿ ಭಾನುವಾರ ಬೆಳಗ್ಗೆ ಸೇನಾ ಆಸ್ಪತ್ರೆಯಲ್ಲಿ ಹೃದಯ ಸ್ತಂಭನದಿಂದ ನಿಧನ ಹೊಂದಿದರು.

ಸೇನಾ ಹಿನ್ನೆಲೆ ಹೊಂದಿದ್ದ ಸಿಂಗ್, ರಕ್ಷಣಾ ಖಾತೆಯಲ್ಲದೆ, ವಿತ್ತ ಮತ್ತು ವಿದೇಶಾಂಗ ಖಾತೆಯಲ್ಲೂ ಅಟಲ್ ಬಿಹಾರಿ ವಾಜಪೇಯಿ ಸರಕಾರದಲ್ಲಿ ಸೇವೆಯನ್ನು ಸಲ್ಲಿಸಿದ್ದರು. ಇವರು ಮಂತ್ರಿ ಮಂಡಲದಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದರು. ಜಸ್ವಂತ್ ಸಿಂಗ್ ಅವರು ರಾಜಸ್ಥಾನದಿಂದ ಬಂದವರಾಗಿ, ವಿತ್ತ ಸಚಿವರಾಗಿ ಕಡಿಮೆ ಅವಧಿಯ ವಾಜಪೇಯಿ ಅವಧಿಯಲ್ಲಿ 1996ರಲ್ಲಿ ಸೇವೆ ಸಲ್ಲಿಸಿದ್ದರು. ನಂತರ 1998-2002ರ ಅವಧಿಯಲ್ಲಿ ವಿದೇಶಾಂಗ ಸಚಿವರಾಗಿದ್ದರು.

ರಕ್ಷಣಾ ಸಚಿವರಾಗಿ ಜಾರ್ಜ್ ಫರ್ನಾಂಡಿಸ್ ರಾಜೀನಾಮೆ ನೀಡಿದಾಗ, ಈ ಖಾತೆಯನ್ನು ನಿರ್ವಹಿಸಿದ್ದರು. ರಾಜಕೀಯ ಮುತ್ಸದ್ದಿಯಾಗಿ ಜಸ್ವಂತ್ ಸಿಂಗ್ ಡಿಸೆಂಬರ್ 1999ರ ತಾಲಿಬಾನಿಗಳು ವಿಮಾನವನ್ನು ಅಪಹರಣ ಮಾಡಿದಾಗ, ಪ್ರಯಾಣಿಕರ ಸುರಕ್ಷಿತ ಬಿಡುಗಡೆಗೆ ಇವರನ್ನು ನಿಯೋಜಿಸಲಾಗಿತ್ತು. ಅಲ್ಲದೆ, ಮೂವರು ಉಗ್ರರು 2008ರ ಮುಂಬೈ ಉಗ್ರ ಚಟುವಟಿಕೆಯಲ್ಲಿ ಭಾಗಿಯಾದವರನ್ನು ತಮ್ಮ ಜೊತೆಗೆ ಕರೆದುಕೊಂಡು ಅಫ್ಘಾನಿಸ್ತಾನಕ್ಕೆ ಹೋಗಿ, 190 ಪ್ರಯಾಣಿಕರ ಸುರಕ್ಷಿತ ಬಿಡುಗಡೆಗೆ ಪ್ರಯತ್ನ ನಡೆಸಿದ್ದರು.

1998ರ ನ್ಯೂಕ್ಲಿಯರ್ ಪರೀಕ್ಷೆಯ ನಂತರ ಸಿಂಗ್ ಅವರು ಅಮೆರಿಕದ ಜೊತೆ ಮಾತನಾಡುವುದಕ್ಕೆ ವಾಜಪೇಯಿ ಅವರಿಂದ ನಿಯೋಜಿಸಲ್ಪಟ್ಟರು. 2004-2009ರ ನಡುವೆ ಬಿಜೆಪಿ ಅಧಿಕಾರ ಕಳೆದುಕೊಂಡ ನಂತರ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. 2009ರಲ್ಲಿ ಸತತ ಎರಡನೇ ಬಾರಿಗೆ ಬಿಜೆಪಿ ಚುನಾವಣೆಯಲ್ಲಿ ಸೋತಾಗ, ಸುದೀರ್ಘ ಚರ್ಚೆಯಾಗಬೇಕೆಂದು ವಿವಾದವನ್ನು ಮೈಮೇಲೆ ಎಳೆದುಕೊಂಡಿದ್ದರು. ತದನಂತರ ಪಾಕಿಸ್ತಾನದ ಮಹಮದ್ ಆಲಿ ಜಿನ್ನಾ ಕುರಿತ ಪುಸ್ತಕ- ಜಿನ್ನಾ: ಇಂಡಿಯಾ ಪಾರ್ಟಿಶನ್ -ಇಂಡಿಪೆನ್‌ಡೆನ್ಸ್ ಅನ್ನು ಬಿಡುಗಡೆಗೊಳಿಸಿದರು. ಜಿನ್ನಾ ಬಗ್ಗೆ ಮೃದುವಾಗಿ ಬರೆದಿದ್ದರು. ಆನಂತರ ಅವರನ್ನು ಮೂಲೆಗುಂಪು ಮಾಡಿ, ಪಕ್ಷದಿಂದ ಉಚ್ಚಾಟಿಸಲಾಯಿತು. ಆಮೇಲೆ ಪಕ್ಷಕ್ಕೆ ಸೇರಿಸಿಕೊಳ್ಳಲಾಯಿತಾದರೂ, 2014ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯ ಟಿಕೆಟ್ ಸಿಗದೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಕರ್ನಲ್ ಸೋನಾ ರಾಮ್ ಇದಿರು ಸೋತರು.